**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 734/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.08**
**ದಿನಾಂಕಃ** 03.01.2026 **ಸಿಡಬ್ಲ್ಯೂ.14**

| | |
|---|---|
| ಹೆಸರು | ರಾಜು ಡಿ |
| ತಂದೆ  ಹೆಸರು | ಲೇಟ್ ತಿಪ್ಪೇಸ್ವಾಮಿ |
| ವಯಸ್ಸು | 48 ವರ್ಷ |
| ಉದ್ಯೋಗ | ಪಿ ಐ |
| ವಾಸ ಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 18.02.2023 ರಿಂದ 22.06.2023 ರವರೆಗೆ ಪಿ ಐ ಆಗಿ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 06.05.20232 ರಂದು ಸಂಜೆ 7.00 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ. 89/2023 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ ವ ವರದಿ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ ವ ವರದಿಯನ್ನು ನಿಪಿ.18 ಎಂದು ಸಾಕ್ಷಿಯ ಸಹಿಯನ್ನು ನಿಪಿ.18 (ಎ) ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದ ಕಡತವನ್ನು ಚಾಸಾ.15 ರವರಿಗೆ ಮುಂದಿನ ತನಿಖೆಗಾಗಿ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿ ಎಸ್ ಪಿ ವಕೀಲರಿಂದಃ**

ಕೃತ್ಯ ನಡೆದ ಸ್ಥಳಕ್ಕೂ ಹಾಗೂ ಗ್ರಾಮಾಂತರ ಠಾಣೆಗೂ ಅಂದಾಜು 5 ಕಿ ಮೀ ಅಂತರದಲ್ಲಿದೆ. ಸಾರಥಿ ಮತ್ತು ಗಂಗನರಸಿ ಗ್ರಾಮದ ವಾಸಿಗಳು ಹರಿಹರಕ್ಕೆ ಬರಬೇಕಾದರೆ ಗ್ರಾಮಾಂತರ ಠಾಣೆ ಮುಂದೆ ಹಾದು ಬರಬೇಕು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಬೆರಳಚ್ಚು ಪಡಿಸಿದವರ ವಿವರ ಅದರಲ್ಲಿ ಇಲ್ಲ ಎಂದರೆ ಸರಿ. ಸದರಿ ವಿಚಾರದ ಬಗ್ಗೆ ನಾನು ಚಾಸಾ.1 ರವರನ್ನು ವಿಚಾರಿಸಿಲ್ಲ ಎಂದರೆ ಸರಿ. ಈ ರೀತಿ ವಿಚಾರಣೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ.

ಗಾಯಾಳುಗಳಿಗೆ ಪರಿಹಾರ ಧನ ಕೊಡಿಸಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ